ಬಿಡುವಿನ ಓದಿನ ಒಡನಾಡಿ
ಭಾನುಪ್ರಭ



- **ಜಯಂತ ಕಾಯ್ಕಿಣಿ**

ಬುದ್ಧ ವಿರಾಮ

ರಜೆಯ ಮೇಲಿದ್ದಾನೋ ಏನೋ ಬಹುಶಃ ಅವನು
ಖಾಲಿ ಅಶ್ವತ್ಥ ಕಟ್ಟೆಯ
ಅಸ್ವಸ್ಥ ಮರವನ್ನು
ಗಾಳಿಯ ತಾಬೆಗೆ ಬಿಟ್ಟು

ಉರುವಲದ ಹೊರೆ ಹೊತ್ತು ಬೆಟ್ಟದಿಂದ
ಇಳಿದು ಬರುವ ದೇವಿಗೆ
ನಡುವೊಮ್ಮೆ ಹೊರೆ ಆನಿಸಿ
ಶ್ವಾಸ ತೆಗೆದುಕೊಳ್ಳಲು ಈ ಕಟ್ಟೆಯೇ
ಪ್ರಶಸ್ತ ಬಿಂದು

ರುಮು ರುಮು ಗಾಳಿಗೂ ಹಾರದಂತೆ
ಹಣೆಗೆ ಕೂದಲು ಅಂಟಿರುವಾಗ
ಸಣ್ಣ ಚಂಚಿಯಿಂದ ತಂಬಾಕಿನ ಎಸಳು
ಬಾಡಿದ ಎಲೆ ಚೂರು ತೆಗೆದು
ಸಾವಕಾಶ ಸುಣ್ಣಸವರುವಾಗಿನ ಆಕೆಯ
ಸಣ್ಣ ಧ್ಯಾನದಂಥ ವಿಲಂಬದಲ್ಲೆ ಇದೆ
ಕಾಲವನ್ನೆ ಅಳಿಸುವ ಹಿಕಮತ್ತು

ಇವಳ ಈ ಗೈರು ಹಾಜರಿಯಲ್ಲೆ
ಮನೆಯಲ್ಲಿ ಮಕ್ಕಳು ಇಡೀ ಕುಟುಂಬಕ್ಕೆ ಒಂದೇ ಇರುವ
ಬಿಳಿ ಬಣ್ಣದ ಹಳೆ ಮೊಬೈಲಿನಲ್ಲಿ ಆನ್ ಲೈನ್ ತರಗತಿಯನ್ನು
ದೂರದ ಆಕಾಶದಲ್ಲಿ ಸದ್ದಿಲ್ಲದೆ ಚಲಿಸುವ
ವಿಮಾನವನ್ನು ನೋಡುವಂತೆ ನೋಡುತ್ತಾರೆ

ಬೇಲೆಯಿಂದ ರೇವೆ ತುಂಬಿಕೊಂಡು ಹೊರಟ ಲಾರಿಗಳು
ಏರಿನಲ್ಲಿ ಗೇರ್ ಬದಲಾಯಿಸುವ ಸದ್ದು
ಮಕ್ಕಳಿಗೆ ಇಷ್ಟ

ಬೆಳದಿಂಗಳಿಗೆ ನೀರು ಬೆರೆಸಬಾರದು
ಎಂದು ಪೇಟೆಯಲ್ಲಿ ಯಾರು ಯಾರಿಗೆ ಯಾಕೆ ಹೇಳಬೇಕು
ಪ್ರಿಸರ್ವೇಟಿವ್ ಹಾಕಿ ಬೇರೆ ಬೇರೆ ಸೈಜುಗಳಲ್ಲಿ
ಪ್ಯಾಕ್ ಮಾಡಿದ ಬೆಳದಿಂಗಳು ಆನ್ ಲೈನ್ ಲಭ್ಯ

ಇನ್ನೇನು ದೇವಿಯ ಧ್ಯಾನ ಮುಗಿಯುವುದು
ಅವಳ ಕಣ್ಣಿಗೆ ಆಗೋ ಆ ಸಮುದ್ರ
ಮಡಿಲಿಗೆ ಬಂದ ಮನುಜ ಕಸವನ್ನೆಲ್ಲ
ಮರಳಿ ದಂಡೆಗೆ ಒಟ್ಟುತ್ತಲೇ ಇರುವ
ಉಲ್ಬಣಿಸಿ ಉಕ್ಕುತ್ತಲೇ ಇರುವ
ಬೃಹತ್ ಲಿಂಬು ಸೋಡಾದಂತೆ ಕಾಣುವುದು

ಇನ್ನು ಈಕೆ ಮನೆ ತಲುಪಿ
ಹೊತ್ತಿಸಲಿರುವ ಒಲೆಯನ್ನು
ಆರಿಸುವ ತಾಖತ್ತು
ಯಾವ ದೇವರಿಗುಂಟು



ಬುದ್ಧನ ಸ್ಥಿತಿ ತಲುಪೋ ಪ್ರಯತ್ನ ಮಾಡೋಣ

- **ಧನಂಜಯ್** ನಟ

ಬುದ್ಧ ನನ್ನ ಯಾಕೆ ಪ್ರಭಾವಿಸಿದ, ಯಾಕೆ ಆತ ನನಗೆ ಇಷ್ಟ ಎಂದರೆ ಮನುಷ್ಯ ಮನುಷ್ಯನಾಗಿಯೇ ಯೋಚನೆ ಮಾಡು. ನಿನ್ನಂತೆಯೇ ಇತರೆ ಮನುಷ್ಯರಿಗೂ, ಪ್ರಾಣಿ, ಜೀವಿಗಳಿಗೂ ಈ ಜಗತ್ತಿನಲ್ಲಿ ಬದುಕುವ ಹಕ್ಕು ಇದೆ ಎಂದು ತುಂಬಾ ಸರಳವಾಗಿ ಹೇಳಿದ ವ್ಯಕ್ತಿ ಬುದ್ಧ.

ಹುಟ್ಟುವಾಗ ನಮಗೆ ಯಾವುದೇ ಆಸೆ, ಆಕಾಂಕ್ಷೆಗಳು, ಮನವಿಗಳು ಇರಲ್ಲ. ಬೆಳೆಯುತ್ತ ನಾನು, ನನ್ನದು ಎನ್ನುವ ಆಸೆಗಳು ಹುಟ್ಟಿಕೊಳ್ಳುತ್ತವೆ. ಕೋಪ, ದ್ವೇಷ ಬೆಳೆಸಿಕೊಳ್ಳುತ್ತೇವೆ. ಆದರೆ, ನನ್ನ ಪ್ರಕಾರ ಬುದ್ಧ, ಆಗಷ್ಟೆ ಹುಟ್ಟಿದ ಮಗುವಿನಂತೆ. ಎಲ್ಲವನ್ನೂ ತೊರೆದು ಜಗತ್ತನ್ನು ನೋಡಿದ ಆತನ ಪರಿ ಇದೆಯಲ್ಲ, ಅದು ಎಲ್ಲರಿಗೂ ಸಾಧ್ಯವಾಗಲ್ಲ. ಆದರೆ, ಬುದ್ಧನ ಆ ಮಗುವಿನ ಸ್ಥಿತಿ ತಲುಪುವುದಕ್ಕೆ ನಾವೆಲ್ಲ ಪ್ರಯತ್ನಿಸಿದರೆ ಬಹುಶಃ ಜಗತ್ತಿನ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ.

ಬುದ್ಧನ ನಾಡು ಶ್ರೀಲಂಕ ತೆಗೆದುಕೊಳ್ಳಿ, ಬುದ್ಧ ಅವರಿಗೆ ಮೂರ್ತಿಯಾಗಿ ಕಂಡಿರಬೇಕು. ಬುದ್ಧ ಅರಿವಿನ ಬೆಳಕು, ಪ್ರಕೃತಿಯ ಜೀವ ಎಂದುಕೊಂಡಿದ್ದರೆ ಬಹುಶಃ ಶ್ರೀಲಂಕಾ ಇಂದಿನ ಪರಿಸ್ಥಿತಿಗೆ ಬರುತ್ತಿರಲಿಲ್ಲ. ನಮ್ಮೊಳಗಿನ ಯುದ್ಧಗಳನ್ನು ನಾವು ಗೆಲ್ಲಬೇಕು. ಎದುರುಗಿದ್ದವರ ಜತೆಗೆ ಯುದ್ಧಕ್ಕಿಂತ ಪ್ರೀತಿ ಹಂಚಿಕೊಳ್ಳಬೇಕು. ಆದರೆ, ಏನಾಗಿದೆ ಈಗ ಬುದ್ಧ, ಬಸವ ಅವರನ್ನು ಮೂರ್ತಿಗಳನ್ನಾಗಿ ಮಾಡಿಟ್ಟು ಅವರ ವಿಚಾರಗಳನ್ನು ಮರೆಯುತ್ತಿದ್ದೇವೆ. ಇಡೀ ಜಗತ್ತು ಮೂರ್ತಿ ಮಾಡುವುದರಲ್ಲಿ ಬ್ಯುಸಿ ಆಗಿದೆ. ವಿಚಾರಗಳನ್ನು ಮರೆತಾಗ ದ್ವೇಷ ಹುಟ್ಟಿಕೊಳ್ಳುತ್ತದೆ. ನಾನೇ ಶ್ರೇಷ್ಠ ಎನ್ನುವ ಅಹಂ ಬೆಳೆಯುತ್ತದೆ. ಬುದ್ಧ, ಬಸವ, ಅಂಬೇಡ್ಕರ್ ಅವರೆಲ್ಲ ಇಂಥದ್ದೇ ಪರಿಸ್ಥಿತಿಯಲ್ಲಿ ಜನ್ಮಿಸಿದವರು ಅಲ್ಲವೇ? ಆದರೆ, ಅವರು ಆ ದುಗುಡ, ದ್ವೇಷ, ಅಸಮಾನತೆಗೆ ಇಂತಿಶ್ರೀ ಹೇಳುವ ನಿಟ್ಟಿನಲ್ಲಿ ಪಯಣ ಆರಂಭಿಸಿದವರು. ಈಗ ಬುದ್ಧನ ವಿಚಾರಗಳನ್ನೂ ನಮ್ಮೊಂದಿಗೆ ತೆಗೆದುಕೊಂಡು ಹೋಗಬೇಕಿದೆ.

ವರ್ತಮಾನದಲ್ಲಿ ಬುದ್ಧನ ಶಾಂತಿ ಬೋಧೆಯ ಅಗತ್ಯತೆ

- **ಎಚ್‌ಎಸ್ ವೆಂಕಟೇಶ್‌ಮೂರ್ತಿ** ಕವಿ

ಸುಮಾರು ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಉತ್ತರಾಪಥದ ಹದಿನಾರು ಗಣರಾಜ್ಯಗಳಲ್ಲಿ ಒಂದಾದ ಶಾಕ್ಯರ ಪ್ರಜಾಸತ್ತೆಯಲ್ಲಿ ದೊರೆ ಶುದ್ಧೋದನನ ಮಗನಾಗಿ ಸಿದ್ಧಾರ್ಥನು ಜನಿಸಿದನು. ಬಾಲ್ಯದಿಂದಲೂ ಸೂಕ್ಷ್ಮ ಮನಸ್ಸಿನ ಸಿದ್ಧಾರ್ಥ ಲೋಕದ ನಶ್ವರತೆ ಮತ್ತು ಜೀವಿಗಳ ಶೋಕದ ಬಗ್ಗೆ ಚಿಂತಿಸುತ್ತಿದ್ದನು, ವೈರಾಗ್ಯದ ಕಡೆ ಅವನ ಮನಸ್ಸು ಬಲಿಯತ್ತಿತ್ತು. ಹೇಗಾದರೂ ಮಾಡಿ ಲೋಕದ ಶೋಕವನ್ನು ಪರಿಹರಿಸುವ ಮಾರ್ಗವನ್ನು ಶೋಧಿಸಲೇಬೇಕೆಂದು ತನ್ನ ಇಪತ್ತೊಂಬತ್ತನೇ ವಯಸ್ಸಿನಲ್ಲಿ ರಾಜ್ಯ ಕೋಶ ತಂದೆ ತಾಯಿ ಪತ್ನಿ ಮಗುವನ್ನು ತೊರೆದು ಅನಿಕೇತನತ್ವದ ದೀಕ್ಷೆ ವಹಿಸಿ ಸನ್ಯಾಸಿಯಾಗಿ ಏಳು ವರ್ಷಗಳ ಕಾಲ ಕಠಿಣವಾದ ತಪಸ್ಸಿನಲ್ಲಿ ತೊಡಗಿದನು. ದೇಹ ದಂಡನೆಯ ಈ ಮಾರ್ಗ ಫಲ ಕೊಡದ ಕಾರಣ ದೇಹವನ್ನು ಅತಿಯಾಗಿ ದಂಡಿಸುವ ಅಥವಾ ಅತಿಯಾಗಿ ಕೊಬ್ಬಿಸುವ ಎರಡೂ ಅತಿಗಳನ್ನು ತ್ಯಜಿಸಿ ಮಧ್ಯಮ ಮಾರ್ಗದಲ್ಲಿ ಧ್ಯಾನಾಸಕ್ತನಾಗಿ ವಾರಣಾಸಿಯ ಸಮೀಪದ ಉರುವೇಲೆ ಎಂಬಲ್ಲಿ ಬೋಧಿ ವೃಕ್ಷದ ಕೆಳಗೆ ವೈಶಾಖಿ ಪೂರ್ಣಿಮೆಯ ದಿವಸ ಬೋಧಿಯನ್ನು ಪಡೆದು ಬುದ್ಧನಾದನು.



ನಾಲ್ಕು ಆರ್ಯ ಸತ್ಯಗಳನ್ನು ಕಂಡುಕೊಂಡನು.
1.ದುಃಖವಿದೆ, 2.ದುಃಖಕ್ಕೆ ಕಾರಣವಿದೆ, 3.ದುಃಖಕ್ಕೆ ಪರಿಹಾರವಿದೆ, 4.ಅಷ್ಟಾಂಗ ಮಾರ್ಗವನ್ನು ಅನುಸರಿಸುವ ಮೂಲಕ ಶೋಕ ಮುಕ್ತನಾಗುವುದು ಸಾಧ್ಯ. ಆಸೆಯೆ ದುಃಖಕ್ಕೆ ಮೂಲ ಎಂದು ತಿಳಿದನು. ಲೋಕ ನಶ್ವರ ಸ್ವರೂಪದ್ದು, ಇಲ್ಲಿ ಯಾವುದೂ ಶಾಶ್ವತವಲ್ಲ. ಹಾಗಿರುವಾಗ ಆತ್ಮ ಶಾಶ್ವತ ಎಂದು ಹೇಳುವುದು ಹೇಗೆ? ಇದೇ ಬುದ್ಧನ ಅನಾತ್ಮವಾದ ನಿಸ್ವಾರ್ಥದಿಂದ ಪರರಿಗಾಗಿ ಬದುಕಬೇಕು -ಎಂಬುದು ಬುದ್ಧನ ವಿಚಾರ ತಾನು ಕಂಡುಕೊಂಡ ಹೊಸ ಬೆಳಕನ್ನು ವ್ಯಾಕುಲಿತ ಜೀವಿಗಳಿಗೆ ಬೋಧಿಸುವ ಮೂಲಕ ಹೊಸ ಧರ್ಮವನ್ನು ಸ್ಥಾಪಿಸಿದನು. ದೈವದ ಹಂಗಿಲ್ಲದ ಯಜ್ಞ ಯಾಗಗಳ ಉಪಾಧಿ ಇಲ್ಲದ ಅಹಿಂಸಾತ್ಮಕವಾದ ಬೌದ್ಧಮತ ಲೋಕಪ್ರಿಯವಾಯಿತು. ತನ್ನ ಎಂಭತ್ತನೇ ತುಂಬು ವಯಸ್ಸಲ್ಲಿ ವೈಶಾಖ ಪೂರ್ಣಿಮೆಯಂದು ಭಗವಾನ್ ಬುದ್ಧನು ಮಲ್ಲರ ರಾಜಧಾನಿ ಕುಶಿನಾರದ ಸಮೀಪದ ಸಾಲವನದಲ್ಲಿ ವೈಶಾಖ ಪೂರ್ಣಿಮೆಯ ಇರುಳು ಯೋಗ ಸಮಾಧಿಯ ಮೂಲಕ ಪರಿನಿರ್ವಾಣ ಪಡೆದನು. ಈವತ್ತಿನ ಹಿಂಸೆ ಧಾವಂತ ಭೋಗಲಾಲಸೆ ಯುದ್ಧ ಪಿಪಾಸೆಯ ಜಗತ್ತಿನಲ್ಲಿ ಕೋವಿಡ್ ಅವಗಢದಿಂದ ನಶ್ವರತೆ ನಮ್ಮ ನಿತ್ಯಾನುಭವ ಆಗುತ್ತಿರುವ ವರ್ತಮಾನದಲ್ಲಿ ಬುದ್ಧನ ಲೋಕ ಮೈತ್ರಿಯ ಶಾಂತಿ ಸಂಧಾನದ ಬೋಧೆ ಇಡೀ ವಿಶ್ವದ ತುರ್ತು ಅಗತ್ಯವಾಗಿದೆ.



ಬುದ್ಧ

ನಾಳೆ
ಬುದ್ಧ
ಪೂರ್ಣಿಮೆ

ಮಾನವತೆಯ ಮಂದಹಾಸ

ತೊರೆದು ಹೋದವನು ತೋರಿದ ದಾರಿ

‘ನೀನು ಸಾವಿರ ಯುದ್ಧ ಗೆಲ್ಲುವ ಮೊದಲು ನಿನ್ನನು ನೀನು ಗೆಲ್ಲು. ಆವಾಗ ಮಾತ್ರ ನಿನಗೆ ಜಯವಾಗುತ್ತದೆ’ ಎಂದಿದ್ದ ಗೌತಮ ಬುದ್ಧನ ಮಾತುಗಳು ಇಂದಿಗೂ, ಎಂದೆಂದಿಗೂ ಪ್ರಸ್ತುತ. ನಾಳೆ(ಮೇ.16) ಬುದ್ಧ ಪೂರ್ಣಿಮೆಯ ದಿನ. ಶಾಂತಿಯ ಬೆಳಕಿನ ಮೂರ್ತ ರೂಪದಂತಿರುವ ಬುದ್ಧ ತಮ್ಮನ್ನು ಪ್ರಭಾವಿಸಿದ್ದು ಹೇಗೆ ಎಂಬುದನ್ನು ಇಲ್ಲಿ ಹಲವರು ಹೇಳಿಕೊಂಡಿದ್ದಾರೆ.

ಬುದ್ಧನ ನಿಸ್ವಾರ್ಥ ಪ್ರೀತಿ ನನಗೆ ಇಷ್ಟ

- **ಇಂದ್ರಕುಮಾರ್ ಎಚ್ ಬಿ** ಸಾಹಿತಿ

ಆಚರಣೆಗಿಂತ ಪ್ರೇಮಕ್ಕೆ ಬದುಕನ್ನು ಅರ್ಥೈಸಿಕೊಳ್ಳುವುದಕ್ಕೆ ಹೆಚ್ಚು ಗಮನ ಕೊಡುವವನು ಬುದ್ಧ. ಒಳಗಿನ ಮನುಷ್ಯನ ಪರಿಚಯ ಮಾನವೀಯತೆಯನ್ನು ಪರಿಚಯ ಮಾಡಿಸುವವನು. ಸರ್ವ ಶ್ರೇಷ್ಠ ಅನ್ನುವುದನ್ನು ಒಪ್ಪದೆ ಎಲ್ಲರೂ ಶ್ರೇಷ್ಠ ಎನ್ನುವ ನೋಟ ಅವನದು. ಶಾಂತಮಯ ನಿಸ್ವಾರ್ಥ ಪ್ರೀತಿಯ ಲೋಕ ಅವನದು. ಆಚರಣೆ ಆಧಾರದ ಧರ್ಮ ಸೃಷ್ಟಿಗಿಂತಲು ಅರಿವಿನ ಮಾನಸಿಕತೆ ವೃದ್ಧಿಸಿದ ಮನೋವೈಜ್ಞಾನಿಕತೆ ಅವನದು. ಬುದ್ಧನ ಸಂಗ ಆಸೆಗಳನ್ನು ಮರೆಸಿ ಅಪರಿಮಿತ ಅನುಭವದೆಡೆಗೆ ನೋಡುವಂತೆ ಮಾಡುವಂಥದು.

ಭೌಗೋಳಿಕ ವ್ಯಾಪ್ತಿಯಲ್ಲೂ ಅವನ ಆರಾಧಕರು ವಿಶ್ವದಲ್ಲೆಲ್ಲ ಹರಡಿರುವರು. ಬಿಟ್ಟುಕೊಡುವುದರಲ್ಲಿನ ಸುಖ, ದಯೆ, ಮಮಕಾರ, ಹಂಚಿಕೊಳ್ಳುವಿಕೆಯನ್ನು ಕಲಿಸುವವನು. ಮನುಷ್ಯ ಸಹಜ ತಿಳುವಳಿಕೆ ಎತ್ತರಿಸುವವನು. ಎಲ್ಲ ಜೀವಿಗಳಿಗೂ ಸಮಾನ ಪ್ರೀತಿ ದಯೆಯ ನೋಟವನು ಉದ್ದೀಪಿಸುವವನು. ‘ಬುದ್ಧ’ನಾಗುವುದು - ಪರಿಪೂರ್ಣನಾಗುವುದೆ ಸರಿ. ಸತ್ಯ ಸಂಗದ ಪರಿಚಯ ಮಾಡಿಸುವವ ನನಗೆ ಇಷ್ಟ.

ಬುದ್ಧ ಪೂರ್ಣಿಮೆ ಪ್ರಜ್ಞೆಯ ದಿನವಾಗಲಿ

- **ವೈಎನ್ ಮಧು** ಸಾಹಿತಿ

ಬುದ್ಧ ಒಂದು ಮನೋಭಾವ. ಎಲ್ಲರೂ ಗಳಿಸಬೇಕಾದ ಮನೋಭಾವ. ನಾವು ಮತದ ಆಚರಣೆಗಳನ್ನು ಆಚರಿಸಿದ ಮಾತ್ರಕ್ಕೆ ಬುದ್ಧರಾಗುವುದಿಲ್ಲ. ಶ್ರಮಪಟ್ಟು ಗಳಿಸಿಕೊಳ್ಳಬೇಕು. ಅತ್ಯಂತ ಮಾನವೀಯ, ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಸಮನ್ವಯಧಾರಿ ಮನೋಭಾವವಿದು. ಒಳಗನ್ನು ಅರಿತು ಸರಿಪಡಿಸಿಕೊಳ್ಳುವ ಮೂಲಕ ಜಗತ್ತನ್ನು ಅರಿತು ನೆಮ್ಮದಿಯ ತಾಣವನ್ನಾಗಿಸುವುದು. ಭಾರತೀಯರಾದ ನಮಗೆ ಗೌತಮ ಬುದ್ಧ ನಮ್ಮ ನೆಲದಲ್ಲಿ ಹುಟ್ಟಿದ್ದ ಎಂಬುದೇ ಅತ್ಯಂತ ಹೆಮ್ಮೆಯ ಸಂಗತಿ. ನಮ್ಮ ನೆಲವೇ ಹಾಗೆ. ಅನೇಕ ಜ್ಞಾನಶಾಖೆಗಳನ್ನು ಹುಟ್ಟುಹಾಕಿದ ಫಲವತ್ತಾದ ನೆಲೆ. ಅಂತಹ ನೆಲವನ್ನು ನಾವಿಂದು ಗಬ್ಬೆಬ್ಬಿಸಿದ್ದೇವೆ. ಗೌತಮನು ಮಡದಿ ತೊರೆದು ಹೋದ ವಿಚಾರ ಕೇಳಿಸಿಕೊಳ್ಳುತ್ತಿರುತ್ತೇವೆ. ನನ್ನ ಪ್ರಕಾರ ಒಬ್ಬ ಇಂಟೆನ್ಸ್ ಲವರ್ ಮಾತ್ರ ಆ ಕೆಲಸಕ್ಕೆ ಕೈಹಾಕಬಲ್ಲ. ಇಂದು ಎಲ್ಲರ ಮನೆಯಲ್ಲಿ, ಕಾರಲ್ಲಿ, ಹೊಟೆಲಲ್ಲಿ ಗೌತಮನ ಪ್ರಶಾಂತ ಮೂರ್ತಿಯನ್ನು ಕಾಣಬಹುದು. ಅದೊಂದು ರೂಪಕ. ಸಾಮಾನ್ಯನು ತಾನು ತಲುಪಬೇಕಾದ ಸ್ಥಿತಿಯನ್ನು ಸದಾ ಕಣ್ಣೆದುರಿಟ್ಟುಕೊಂಡಿರುವ ರೂಪಕ. ಎಚ್ಚರಿಕೆಯ ಗಂಟೆ. ಬುದ್ಧ ಪೂರ್ಣಿಮೆಯನ್ನು ಒಂದು ಮತವನ್ನಾಗಿ ನೋಡದೆ ಒಬ್ಬ ವ್ಯಕ್ತಿಯ ದಿನವೆಂದು ನೋಡದೆ ಪ್ರಜ್ಞಾಪೂರ್ವಕವಾಗಿ ಅರ್ಥಪೂರ್ಣವಾಗಿ ಆಚರಿಸಬೇಕಾದ ದಿವಸ.

ಓದಿನ ಮನೆ

ಬೊಳುವಾರರು ದಾಟಿ ಬಂದ ಸೇತುವೆಗಳ ಕತೆ

ಬೊಳುವಾರು ಮಹಮದ್ ಕುಂಞ್ ಅವರಿಗೆ ಅಮ್ಮ ಪ್ರೀತಿಯಿಂದ ಕರೆಯುತ್ತಿದ್ದ ಹೆಸರು ಮೋನು. ಆ ಕಾರಣದಿಂದಲೇ ಅವರ ಆತ್ಮಕತೆಯ ಹೆಸರು ಮೋನು ಸ್ಮೃತಿ. ಆಕರ್ಷಕ ತಲೆಬರಹಗಳನ್ನು ನೀಡುವುದರಲ್ಲಿ ಬೊಳುವಾರರದು ಎತ್ತಿದ ಕೈ. ಅದಕ್ಕೆ ಪುರಾವೆಗಳು ಆ ಆತ್ಮಕತೆಯಲ್ಲಿ ದೊರೆಯುತ್ತವೆ.

ಜಾಣ ಬರಹಗಾರ ಬೊಳುವಾರು ಅವರ ಕತೆಗಳನ್ನು ಸಣ್ಣ ಸಣ್ಣ ಕತೆಗಳ ಮೂಲಕ ನಿರೂಪಿಸಿದ್ದಾರೆ. ಬಹುತೇಕ ಕತೆಗಳಲ್ಲಿ ತಮಾಷೆ, ವಿಡಂಬನೆ ಮತ್ತು ವ್ಯಂಗ್ಯ ಹೆಚ್ಚು ಕಾಣಿಸಿದರೆ ಅದರಾಳದಲ್ಲೆಲ್ಲೋ ವಿಷಾದ ಅಡಗಿಡುವಂತೆ ಬರೆಯುವುದು ಬೊಳುವಾರು ಶೈಲಿ. ಹಾಗಾಗಿಯೇ ಅವರ ಬರಹಗಳು ತುಂಬಾ ಬೋರ್ ಹೊಡೆಸುವುದಿಲ್ಲ. ಇಮೇಜ್‌ಗಳನ್ನು ಕಟ್ಟಿಕೊಡುತ್ತಾ, ಮಂಗಳೂರು-ಗುಲ್ಬರ್ಗಾ-ಉಡುಪಿ-ಪುತ್ತೂರು ಮುಂತಾದ ಊರುಗಳಲ್ಲಿ ಅಡ್ಡಾಡುವಂತೆ ಮಾಡುತ್ತಾ, ವೈಚಾರಿಕವಾಗಿ ಚಿಂತನೆಗೆ ಹಚ್ಚುವಂತೆ ಮಾಡುತ್ತಾರೆ. ಇಲ್ಲಿ ಬ್ಯಾಂಕು-ಪತ್ರಿಕೋದ್ಯಮದ ಧೀಮಂತರ ನೆನಪುಗಳಿವೆ, ಆಪ್ತರ ಜೀವನದ ದುರಂತದ ಬೆಂಕಿ ಸಾಲುಗಳಿವೆ, ಮರೆತು ಹೋಗಬಹುದಾದ ಲಘು ಕಥನಗಳಿವೆ, ಎಲ್ಲಕ್ಕಿಂತ ಹೆಚ್ಚಾಗಿ ಅವರು ದಾಟಿ ಬಂದ ವಿಧವಿಧದ ಸೇತುವೆಗಳಿವೆ. ಕೆಲವು ಸೇತುವೆಗಳಲ್ಲಿ ಅವರ ಹೆಸರುಗಳಿವೆ. ಇನ್ನೊಂದಷ್ಟು ಸೇತುವೆಗಳು ಅವರ ಹೃದಯದಲ್ಲಿ ಅಚ್ಚಾಗಿದ್ದು ದಾಖಲಾಗಿದೆ.

ಇದೊಂದು ವಿಶಿಷ್ಟ ಆತ್ಮಕಥನ. ಊರುಗಳ ಕತೆಯಾಗಿಯೂ ಪತ್ರಿಕೋದ್ಯಮದ ಸ್ಥಿತಿಗತಿಯಾಗಿಯೂ ಬ್ಯಾಂಕುಗಳ ದಾರಿಯ ಫಲಕವಾಗಿಯೂ ಸಾಮರಸ್ಯದ ಖುಷಿಯಾಗಿಯೂ ಸ್ವಾರ್ಥಿಗಳ ಕುತ್ಸಿತ ಮನಸ್ಥಿತಿಯೂ ಈ ಕಥನ ಕಾಣಿಸುತ್ತಾ ಹೋಗುತ್ತದೆ. ಕಾಣಿಸುವಂತೆ ಬರೆಯುವುದು ಎಲ್ಲರಿಗೂ ಒಲಿಯುವುದಿಲ್ಲ. ಹಾಗಾಗಿ ಬೊಳುವಾರರ ಆತ್ಮಕತೆ ಓದುಗನಲ್ಲಿ ತಲ್ಲಣ ಹುಟ್ಟಿಸುವ ಕುತೂಹಲಕರ ಕೃತಿಯಾಗಿ ಮೂಡಿಬಂದಿದೆ.



ಮೋನು ಸ್ಮೃತಿ (ಆತ್ಮಕತೆ)

- **ಲೇ: ಬೊಳುವಾರು ಮಹಮದ್ ಕುಂಞ್**
ಪ್ರಕಾಶನ: ನವಕರ್ನಾಟಕ ಪ್ರಕಾಶನ, ಬೆಂಗಳೂರು.
ಬೆಲೆ: ರು.350 **ಪುಟ:** 352
ಮೊ: 080-22161900

ಸುಪಾರಿ ಕೊಲೆಯಲ್ಲಿ ಗೆದ್ದ ಮಾವಲಿ, ಚಂದ್ರಕೀರ್ತಿ

ಕೊಲೆಗೂ ಮಾನವೀಯತೆ ನೆರಳು ಇದಿಯೇ?

- **ಜಿ ಎನ್ ಮೋಹನ್**

ಶಿವಕುಮಾರ ಮಾವಲಿ ಸ್ಕ್ರಿಪ್ಟ್, ಚಂದ್ರಕೀರ್ತಿ ನಿರ್ದೇಶನ, ಮೂವರು ಕಲಾವಿದರ ನುರಿತ ಅಭಿನಯ, ‘ವ್ಯೋಮ’ ಎನ್ನುವ ಆಪ್ತ ರಂಗಭೂಮಿ. ಒಬ್ಬ ನೋಡುಗನಿಗೆ ಇದಕ್ಕಿಂತ ಬೆಸ್ಟ್ ಪ್ಯಾಕೆಜ್ ಇರಲು ಹೇಗೆ ಸಾಧ್ಯ? ಶಿವಕುಮಾರ ಮಾವಲಿ ಹಾಗೂ ಚಂದ್ರಕೀರ್ತಿ ಕಾಂಬಿನೇಷನ್ ಎನ್ನುವುದೇ ಒಂದು ರೀತಿಯ ಆಕರ್ಷಣೆ. ಇದಕ್ಕೆ ಮುಖ್ಯ ಕಾರಣ ಇಬ್ಬರೂ ಇಂದಿನ ಪೀಳಿಗೆಯ ನಾಡಿ ಮಿಡಿತ ಬಲ್ಲವರು ಹಾಗೂ ನಾಳೆಗೆ ಬೇಕಾದ ವೇಗದಲ್ಲಿ ಚಿಂತಿಸಬಲ್ಲವರು. ಹೀಗಾಗಿಯೇ ಸ್ಕ್ರಿಪ್ಟ್ ಹಾಗೂ ನಿರ್ದೇಶನ ಈ ಎರಡರ ನಡುವೆ ಒಂದು ಸುಂದರ ಸ್ಪರ್ಧೆ ಏರ್ಪಟ್ಟು ನೋಡುಗನಿಗೆ ಬೆಸ್ಟ್ ಎನ್ನುವುದು ಸಿಕ್ಕಿ ಹೋಯಿತು.

ಚಂದ್ರಕೀರ್ತಿ ನಿರ್ದೇಶಿಸಿದ ‘ಸುಪಾರಿ ಕೊಲೆ’ ಇತ್ತೀಚೆಗೆ ‘ವ್ಯೋಮ’ದಲ್ಲಿ ಪ್ರದರ್ಶನಗೊಂಡಿತು. ಮಕ್ಕಳ ರಂಗಭೂಮಿಯಿಂದ ಅರಳಿದ ಚಂದ್ರಕೀರ್ತಿ ಈಗಾಗಲೇ ಸಾಕಷ್ಟು ನಾಟಕ ನಿರ್ದೇಶಿಸಿದ್ದಾರೆ. ಈ ಪೈಕಿ ‘ಕಕೇಶಿಯನ್ ಚಾಕ್ ಸರ್ಕಲ್’ ದೇಶದ ಬೆಸ್ಟ್ ನಾಟಕ ಸ್ಪರ್ಧೆ ಎನಿಸಿದ ಮೆಟಾ ಸ್ಪರ್ಧೆಗೆ ಆಯ್ಕೆಯಾಗಿತ್ತು. ಶಿವಕುಮಾರ ಮಾವಲಿ ಬರೆದ ಪುಟ್ಟ ಕಥೆ ಸುಪಾರಿ ಕೊಲೆ ನಂತರ ಕಲಾವಿದ, ನಿರ್ದೇಶಕ ಚಂದ್ರಶೇಖರ ಶಾಸ್ತ್ರಿ ಕಾರಣದಿಂದಾಗಿ ನಾಟಕದ ರೂಪು ತಳೆಯಿತು. ಈಗಾಗಲೇ ಶಿವಮೊಗ್ಗದ ‘ಹೊಂಗಿರಣ’ದಿಂದ ಪ್ರದರ್ಶನ ಕಂಡಿರುವ ಈ ನಾಟಕವನ್ನು ಚಂದ್ರಕೀರ್ತಿ ತಮ್ಮ ‘ಥಿಯೇಟರ್ ಆರ್ಟಿಸ್ಟ್ರೀ’ಗೆ ಕೈಗೆತ್ತಿಕೊಂಡಿದ್ದರು.

‘ಕೊಲೆಯಲ್ಲೂ ಮಾನವೀಯತೆಯೇ?’ ಎನ್ನುವ ಅಚ್ಚರಿಯನ್ನು ನಾಟಕದ ಉದ್ದಕ್ಕೂ ಕೇಳುವಂತೆ ಮಾಡುವ ನಾಟಕ ಇದು. ಮರ್ಯಾದಾ ಹತ್ಯೆ, ದಯಾ ಮರಣ ಕೇಳಿದವರಿಗೆ ಇದೇನು ಮಾನವೀಯ ಹತ್ಯೆ ಎಂದು ಕುತೂಹಲ ಹುಟ್ಟಿಸುವ ನಾಟಕ ಇದು. ಶಿವಕುಮಾರ ಮಾವಲಿ ತಮ್ಮ ಎಲ್ಲಾ ಕಥೆಗಳಂತೆ ಇದರಲ್ಲಿಯೂ ಸಾಕಷ್ಟು ಟ್ವಿಸ್ಟ್ ಇಟ್ಟು ಕೊನೆಗೆ ಸುಪಾರಿ ಕೊಲೆಗೆ ಟಾರ್ಗೆಟ್ ಸುಪಾರಿ ಕೊಟ್ಟವಳೇ ಎನ್ನುವ ಹಂತಕ್ಕೆ ತಂದು ನಿಲ್ಲಿಸುತ್ತಾರೆ. ಆ ನಂತರದಲ್ಲಿ ಸುಪಾರಿ ಕೊಟ್ಟ ಅರ್ಚನಾ ಗುಪ್ತ, ಸುಪಾರಿ ಕೊಲೆಗಾರ ಬಾಬು ರೆಡ್ಡಿ, ತನಿಖೆ ನಡೆಸುತ್ತಿರುವ ಅಲೋಕ್ ಕುಮಾರ್ ನಡುವಣ ಸಂಭಾಷಣೆಯೇ ಈ ನಾಟಕದ ಹೈಲೈಟ್.

ಬದುಕು, ವ್ಯವಹಾರ, ಈ ಎರಡರೊಳಗಿನ ಮಾನವೀಯತೆ, ಅದು ಹುಟ್ಟು ಹಾಕುವ ಪಶ್ಚಾತ್ತಾಪ ನೋಡುಗನನ್ನು ಕಲಕುತ್ತಾ ಪ್ರಶ್ನಿಸಿಕೊಳ್ಳುವಂತೆ ಮಾಡುತ್ತಾ ಸಾಗುತ್ತದೆ.

ಪ್ರವೀಣ್ ಬಾಲಗೌಡರ್, ಲಕ್ಷ್ಮೀ ಗೌಡ ಹಾಗೂ ಅರುಣೇಶ್ ಗೌಡ ನಾಟಕವನ್ನು ಚೆನ್ನಾಗಿ ತೂಗಿಸಿದ್ದಾರೆ. ಐದು ನಿಮಿಷ ಬಂದು ಹೋಗುವ ಪಾತ್ರವಾದರೂ ಚಂದ್ರಕೀರ್ತಿ ಮಿಂಚಿ ಬಿಟ್ಟಿದ್ದಾರೆ. ಕಥೆ ಓದಿದ ವಿದ್ಯಾ ಉಳಿತ್ತಾಯ ಸಹಾ ಸೈ ಅನಿಸಿಕೊಂಡರು. ಚಂದ್ರಕೀರ್ತಿಗೆ ಸದಾ ಹೊಸದರತ್ತ ತುಡಿಯುವ ಹಂಬಲ. ಅದು ಈ ನಾಟಕದಲ್ಲೂ ನಿಚ್ಚಳವಾಗಿದೆ. ನಾಟಕ ಆರಂಭಕ್ಕೆ ಮುನ್ನ ಶಿವಕುಮಾರ ಮಾವಲಿಯವರ ಇನ್ನೊಂದು ಕಥೆಯನ್ನು ಓದಿಸಿ ಒಂದು ಆವರಣ ಸೃಷ್ಟಿಸಿಕೊಟ್ಟದ್ದು, ನಾಟಕದ ಕೊನೆಯಲ್ಲಿ ಇಡೀ ನಾಟಕದ ಎಳೆಯನ್ನು ರ್‍ಯಾಪ್ ಸಾಂಗ್ ಆಗಿ ಪರಿವರ್ತಿಸಿದ್ದು, ಸೆಟ್ ರೂಪಿಸುವಲ್ಲಿ ಇರುವ ಜಾಣ್ಮೆ ಎಲ್ಲವೂ ಕೀರ್ತಿಯ ಕೀರ್ತಿಯೇ ಸರಿ.